**ದಿನಾಂಕಃ 12/12/2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

ನನ್ನ ಮತ್ತು ಸಿದ್ದಪ್ಪ ಇವರ ಮಧ್ಯ ಮನಸ್ತಾಪ ಆಗಿ 5 ವರ್ಷ ಆಗಿದೆ. 1 ನೇ ಪ್ರತಿವಾದಿಯು 6-7 ವರ್ಷಗಳಿಂದ ಪ್ರತ್ಯೇಕ ಮನೆ ಮಾಡಿಕೊಂಡು ವಾಸವಾಗಿದ್ದಾನೆ. ನನ್ನ ಅಣ್ಣ ಸಿದ್ದಪ್ಪ ಸಿ ಟಿ ಎಸ್ 3145/2 ಇದರಲ್ಲಿ ವಾಸವಾಗಿದ್ದಾನೆ ಎಂದರೆ ಸರಿ. ದನ ಕಟ್ಟಿಕೊಂಡು ವಾಸವಾಗಿದ್ದಾನೆ. 1 ನೇ ಪ್ರತಿವಾದಿಯು ಮೇಲ್ಕಾಣಿಸಿದ ಆಸ್ತಿಯಲ್ಲಿ ದನ ಕಟ್ಟಿಕೊಳ್ಳದೆ ಅಲ್ಲದೇ ವ್ಯವಸಾಯದ ವಸ್ತುಗಳನ್ನು ಇಟ್ಟುಕೊಂಡಿದ್ದಾನೆ ಎಂದರೆ ಸರಿಯಲ್ಲ.

ಫೋಟೋದಲ್ಲಿ ಕಾಣುತ್ತಿರುವವರು ನನ್ನ ಅಣ್ಣ ಮತ್ತು ನನ್ನ ಅಣ್ಣನ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ಸದರಿ ಫೋಟೋವನ್ನು ಸಾಕ್ಷಿ ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಫೋಟೋದ ಸಿಡಿ ಯನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿರುವ ಮನೆ ಸಿ ಟಿ ಎಸ್ 3145/2 ದಲ್ಲಿರುವ ಮನೆ ಎಂದರೆ ಸರಿ. ಉಳಿದ ಫೋಟೊಗಳು ಸಿ ಟಿ ಎಸ್ 3145/2 ಇದಕ್ಕೆ ಸಂಬಂದಿಸಿದ 23 ಫೋಟೋಗಳು ಇರುತ್ತವೆ ಅವುಗಳನ್ನು ಒಟ್ಟಿಗೆ ನಿಡಿ-3 ಎಂದು ಗುರುತಿಸಲಾಯಿತು.

ದಾವಾ ಆಸ್ತಿ ಅಂದರೆ ಸಿ ಟಿ ಎಸ್ ನಂ. 3145/2 ಈಗ ಯಾರ ಹೆಸರಿನಲ್ಲಿ ಇದೆ ಎಂದು ನಾನು ದಾಖಲೆಗಳನ್ನು ನೋಡಿಲ್ಲ. ಈಗ 4-5 ವರ್ಷಗಳ ಹಿಂದೆ ಸದರಿ ಆಸ್ತಿಯ ದಾಖಲೆಗಳನ್ನು ನೋಡಿದ್ದೇನೆ. ನಾವು ಆ ದಾಖಲೆಯನ್ನು ನೋಡಿದಾಗ ಅದು ಮಂಜಪ್ಪ ಅಲಿಯಾಸ್ ಮಂಜನಗೌಡ ದೊಡ್ಡಗೌಡರ ಇವರ ಹೆಸರಿನಲ್ಲಿತ್ತು. ಸದರಿ ಮಂಜಪ್ಪ ನನ್ನ ತಂಗಿ ಗಂಡ ಇರುತ್ತಾನೆ. ನಾನು 1 ನೇ ಪ್ರತಿವಾದಿಯು ಏನು ದಾಖಲೆಗಳನ್ನು ಹಾಜರಪಡಿಸಿದ್ದಾನೆ ಎಂದು ನೋಡಿ

ತಿಳಿದುಕೊಂಡಿದ್ದೇನೆ. 1 ನೇ ಪ್ರತಿವಾದಿಯು ತಾನು ಖರೀದಿಸಿದ ಖರೀದಿ ಪತ್ರದ ನಕಲನ್ನು ಹಾಜರಪಡಿಸಿದ್ದಾನೆ ಎಂದರೆ ಸರಿ. ನಾನು ಅದನ್ನು ನೋಡಿದ್ದೇನೆ. 1 ನೇ ಪ್ರತಿವಾದಿಯು ಚಾಲ್ತಿ ವರ್ಷದ ಸಿ ಟಿ ಎಸ್ 3145/2 ಇದರ ಉತಾರ ಹಾಜರಪಡಿಸಿದ್ದನ್ನು ನಾನು ತಿಳಿದುಕೂಂಡಿಲ್ಲ. ಅದೇ ರೀತಿ ಈ-ಸ್ವತ್ತಿನ ಚಾಲ್ತಿ ವರ್ಷದ ಪ್ರತಿಯನ್ನು ಹಾಜಪರಡಿಸಿದ್ದನ್ನು ನಾನು ನೋಡಿ ತಿಳಿದುಕೂಂಡಿಲ್ಲ.

1 ನೇ ಪ್ರ2ವಾದಿಯ ಸಿ ಟಿ ಎಸ್ 3145/2 ಇದರ ದಾಖಲೆಗಳನ್ನು ತಿದ್ದುಪಡಿ ಮಾಡಿದ್ದನ್ನು ನಾನು ಆ ದಾಖಲೆಗಳನ್ನು ನಾನು ನೋಡಿದ್ದೇನೆ. ಬೇರೆ ಯಾವುದೇ ದಾಖಲೆಯನ್ನು ನಾನು ನೋಡಿಲ್ಲ. 1 ನೆ ಪ್ರತಿವಾದಿಯು ನನ್ನ ತಂದೆಯ ಹೆಸರಿನಲ್ಲಿದ್ದ ಸಿ ಟಿ ಎಸ್ 3145/2 ಇದನ್ನು ನನ್ನ ತಂಗಿಯ ಗಂಡ ಮಂಜಣ್ಣ ಈತನ ಹೆಸರಿನಲ್ಲಿ ಮಾಡಿ ದಾಖಲೆ ಸೃಷ್ಟಿಸಿದ್ದಾನೆ. 1 ನೇ ಪ್ರತಿವಾದಿಯು ನನ್ನ ತಂದೆ ನಾನು, ಶೃತಿ, ಚನ್ನಬಸಮ್ಮ, ಇವರ ಸಹಿಗಳನ್ನು ಪೋರ್ಜರಿ ಮಾಡಿ ಹಕ್ಕು ಬಿಟ್ಟ ಪತ್ರ ಮಾಡಿಕೊಂಡಿದ್ದಾನೆ. ಆ ದಾಖಲೆಯನ್ನು ಈಗ 5 ವರಷಗಳ ಹಿಂದೆ ನೋಡಿದ್ದೇನೆ. 5 ವರ್ಷ ಆದ ನಂತರ ಈತ್ತೀಚಿಗೆ ಆ ದಾಖಲೆಗಳನ್ನು ನೋಡಿಲ್ಲ. ಆ ಹಕ್ಕು ಬಿಟ್ಟು ಪತ್ರದ ಪ್ರತಿ ನನ್ನ ಬಳಿ ಇಲ್ಲ. ಆ ದಾಖಲೆಯನ್ನು ನಗರಸಭೆಯಲ್ಲಿ ಇರಬಹದು. ನನ್ನ ತಂದೆ ಆ ದಾಖಲೆಯನ್ನು ನೋಡಿ ಬರಲು ಕಳುಹಿಸಿದ್ದರು ನಾನು ಆಗ ಹೋಗಿದ್ದೆನು. ನಾನು ನನ್ನ ತಾಯಿ ಶಾಂತಮ್ಮ ಸೇರಿ ಹೋಗಿದ್ದೆವು. ಆ ದಾಖಲೆಯನ್ನು ನೋಡಲು ನಾವು ಅರ್ಜಿ ಕೊಟ್ಟಿದ್ದೆವು. ಅರ್ಜಿಯನ್ನು ನಾನೇ ಸಹಿ ಮಾಡಿಕೊಟ್ಟಿದ್ದೇನೆ. ನಗರಸಬೆಯವರು 2-3 ದಿನ ಬಿಟ್ಟು ನಂತರ ಆ ದಾಖಲೆಯನ್ನು ತೋರಿಸಿದ್ದಾರೆ. ನಾವು 1 ನೇ ವಿಬಾಗದಲ್ಲಿ ಆ ದಾಖಲೆಯನ್ನು ನೋಡಿದ್ದೇವೆ. ಆ ದಾಖಲೆ ನೋಡಿದ ನೆಂತರ ಅದರ ಪ್ರತಿಯನ್ನು ತಗೆದುಕೊಳ್ಳಬೇಕು ಎಂದು

ಅನಿಸಲಿಲ್ಲ. ನಮ್ಮ ಕುಟುಂಬದಲ್ಲಿ ಇವತ್ತಿನವರೆಗೆ ಆ ದಾಖಲೆಯನ್ನು ಯಾರಾದರೂ ತೆಗೆಸಿಕೊಳ್ಳಲು ಪ್ರಯತ್ನ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನಗರಸಭೆಗೆ ಹೋದ ದಿನಾಂಕ ನೆನಪಿಲ್ಲ. ನಗರಸಭೆಯವರು ನಾವು ಕೊಟ್ಟಿದ್ದ ಅರ್ಜಿಗೆ ಪ್ರತಿ ಮುಟ್ಟಿದೆ ಎಂದು ಸಹಿ ಮಾಡಿಕೊಟ್ಟಿದ್ದರು. ನಗರಸಭೆಗೆ ಹೋದ ಬಗ್ಗೆ ,ದಾಖಲೆ ಪರಿಶೀಲಿಸಿದ ಬಗ್ಗೆ ,ದಾಖಲೆ ಪರಿಶೀಲಿಸಲು ಅರ್ಜಿ ಕೊಟ್ಟ ಬಗ್ಗೆ , ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ ಎಂದರೆ ಸರಿ. ಈ ಎಲ್ಲ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ 4 ಜನ ಅಳಿಯಂದಿರು. ನನ್ನ ತಂದೆ ಜೀವಂತ ಇದ್ದಾಗ ಎಲ್ಲ 4 ಜನ ಅಳಿಯಂದಿರು ಜೊತೆ ಉತ್ತಮ ಸಂಬಂದ ಹೊಂದಿದ್ದರು. ಅವರ ಯಾವ ಅಳಿಯಂದಿರು ನಮ್ಮ ಕುಟುಂಬಕ್ಕೆ ಕೆಟ್ಟದ್ದನು ಬಯಸಿಲ್ಲ ಎಂದರೆ ಸರಿ. ನಿಪಿ-5 ರಲ್ಲಿರುವ ಮಂಜಪ್ಪ ನನ್ನ ತಂಗಿ ಚನ್ನಬಸಮ್ಮ ಇವರ ಗಂಡ ಇರುತ್ತಾರೆ. ನಿಪಿ-5 ರಲ್ಲಿ ನನ್ನ ತಂಗಿಯ ಗಂಡ ಹಾಗೂ ನನ್ನ ಅಣ್ಣ 1 ನೇ ಪ್ರತಿವಾದಿಯ ಪೋಟೋ ಇದೆ ಎಂದರೆ ಸರಿ. ಸದರಿ ಕ್ರಯ ಪತ್ರಕೆ ಯಾರು ಸಾಕ್ಷಿ ಹಾಕಿದ್ದಾರೆಂದು ಗೊತ್ತಿಲ್ಲ. ಕ್ರಯ ಪತ್ರವನ್ನು ಎಷ್ಟು ಹಣಕ್ಕೆ ಬರೆಸಿಕೊಂಡಿದ್ದಾರೆ ಎಂದು ಗೊತ್ತಿಲ್ಲ . ಸದರಿ ಸಿ ಟಿ ಎಸ್ ನಂ 3 ಗುಂಟೆ ವಿಸ್ತೀರ್ಣ ಇದೆ. ನಿಪಿ-5 ರಲ್ಲಿ ಸದರಿ ಸಿ ಟಿ ಎಸ ನಂಬರು ಅಳತೆ ಬರೆದಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಸಿ ಟಿ ಎಸ್ 3145/2 ಇದು ಮಾರಾಟಗಾರರಿಗೆ ಯಾವ ರೀತಿ ಬಂದಿತ್ತು ಎಂದು ತಿಳಿದುಕೊಂಡಿದ್ದೇನೆ. ನಮ್ಮ ತಂದೆ ಖರೀದಿ ಹಿಡಿದಿದ್ದರಿಂದ ಅದು ಅವರಿಗೆ ಬಂದಿತ್ತು. ಸದರಿ ಆಸ್ತಿಯ ಬಗ್ಗೆ ನನ್ನ ತಂದೆ ಹಾಗೂ ಕುರುಬಗೇರಿ ವಾಸಿಗಳ ಮಧ್ಯ ಬಹಳ ವರ್ಷಗಳಿಂದ ಜಗಳ ಇತ್ತು ಎಂದರೆ ಸರಿಯಲ್ಲ. ಆ ಆಸ್ತಿಯ ಬಗ್ಗೆ ಯಾವುದೇ ಜಗಳ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಆ ಆಸ್ತಿ ವಿಚಾರರವಾಗಿ ಜಗಳ ಇತ್ತು ಎಂದು ಬರೆಸಿಲ್ಲ.ನನ್ನ ಮುಖ್ಯ

ವಿಚಾರಣೆಯ 4 ನೇ ಪ್ಯಾರದಾಲ್ಲಿ ಈ ವಿಷಯವನ್ನು ಬರೆಸಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂರೆಸ ರಿಯಲ್ಲ.

ದಾವಾ ಹಾಕುವ ಕಾಲಕ್ಕೆ ಆಸ್ತಿಯ ಕಿಮ್ಮತ್ತು ಎಷ್ಟು ಇತ್ತು ಎಂದು ಗೊತ್ತಿಲ್ಲ. ಆಸ್ತಿಯ ಕಿಮ್ಮತ್ತು ಎಷ್ಟು ಇದೆ ಎಂದು ದಾವೆಯಲ್ಲಿ ನಮ್ಮ ತಂದೆ ತೋರಿಸಿದ್ದರೋ ತೋರಿಸಿಲ್ಲವೋ ನನಗೆ ಗೊತ್ತಿಲ್ಲ. ಸಿ ಟಿ ಎಸ್ 3145/2 ಇದು ಹಳೆ ಪಿ ಬಿ ರಸ್ತೆಯ ಪಕ್ಕದಲ್ಲಿ ಬರುತ್ತಿತ್ತು ಎಂದರೆ ಸರಿ.

ದಾವಾ ಹಾಕಿದ ನಂತರ ನನ್ನ ತಂಗಿಯ ಗಂಡ ಮಂಜಪ್ಪ ದಾವಾ ಆಸ್ತಿಯನ್ನು ಯಾರಿಗೆ ಮಾರಾಟ ಮಾಡಿದ್ದಾರೆಂದು ಗೊತ್ತಿಲ್ಲ. ದಾವೆ ಚಾಲ್ತಿಯಲ್ಲಿರುವಾಗ ಸಿ ಟಿ ಎಸ್ 3145/2 ಇದು ನನ್ನ ತಂಗಿಯ ಗಂಡನಿಂದ 1 ನೇ ಪ್ರತಿ ವಾದಿಗೆ ಮಾರಾಟ ವಾದಂತೆ ದಾಖಲೆ ಇದೆ. ಆ ಬಗ್ಗೆ ನಾನು ಕೇಳಿ ತಿಳಿದುಕೊಂಡಿದ್ದೇನೆ. ಖರೀದಿ ಹಿಡಿದಾಗಿನಿಂದ 1 ನೇ ಪ್ರತಿವಾದಿಯು ಸದರಿ ಆಸ್ತಿಯ ಮಾಲೀಕ ಮತ್ತು ಕಬ್ಜಾದಾರ ಇರುತ್ತಾನೆ ಎಂದರೆ ಸರಿಯಲ್ಲ. ನಿಡಿ-1 ರಿಂದ 3 ಇವು ಸಿ ಟಿ ಎಸ್ 3145/2 ಇದರ ಇತ್ತೀಚಿನ ಪೋಟೋಗಳು ಎಂದರೆ ಸರಿ.

ದಿಃ 05-05-2014 ರಂದು ನಾನು ರಾಣೇಬೆನ್ನೂರಿನಲ್ಲಿ ಇದ್ದೆನು. ಅದೇ ರೀತಿ ನನ್ನ ತಂದೆ ತಾಯಿ ಸಹೋದರಿಯಲ್ಲರೂ ಇದೇ ಊರಿನಲ್ಲಿ ಇದ್ದೆವು. ಆ ದಿನ ನನ್ನ ತಂದೆಗೆ ಹುಷಾರಿಲ್ಲದ ಕಾರಣ ಎಲ್ಲರೂ ಸೇರಿದ್ದೆವು. ಅವರಿಗೆ ಜ್ವರ ಜಾಸ್ತಿ ಆಗಿದ್ದವು. ಜ್ವರವನ್ನು ಬಿಟ್ಟು ಬೇರೆ ಯಾವುದೇ ಕಾಯಿಲೆ ಇರಲಿಲ್ಲ. ಆ ದಿನ ನಾವು ಎಲ್ಲರೂ ಸೇರಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಅಧಿಕಾರ ಪತ್ರ ಬರೆದಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆ ದಿನ ಏಕಾಂತ ಮುದಿಗೌಡರ ಎನ್ನುವ ನೋಟರಿಯವರ ಬಳಿ ಹಾಜರಾಗಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಅದಿಕಾರ ಪತ್ರ ಬರೆದುಕೊಟ್ಟು ಅದನ್ನು ಅದರ ರೆಜಿಸ್ಟರ ನಂ. 323/2014 ರಲ್ಲಿ ನೋಟರಿ ಮಾಡಿದ್ದಾರೆ

ಎಂದರೆ ಸರಿಯಲ್ಲ. ಅದಕ್ಕೆ ನಾವು 6 ಜನ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ಅದಿಕಾರ ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ . ಆ ಅದಿಕಾರ ತ್ರಪ್ರವನ್ನು ಕೋರ್ಟಿಗೆ ಕೇಸು ಹಾಕುವ ಒಂದು ತಿಂಗಳ ಮೊದಲು ನೋಡಿದ್ದೇವೆ. ನನ್ನ ತಂದೆ ಅದರ ಪ್ರತಿಯನ್ನು ತೆಗೆಸಿಕೊಂಡು ಬಂದಿದ್ದರು. ಅದನ್ನು ಮನೆಯಲ್ಲಿ ಇದ್ದಾಗ ನೋಡಿದ್ದೇನೆ. ಅದರ ಮೂಲ ಪ್ರತಿ ಎಲ್ಲಿದೆ ತಿಳಿದುಕೊಳ್ಳಲು ನಾವು ಯಾರು ಪ್ರಯತ್ನ ಮಾಡಿಲ್ಲ. ಅದರ ಮೂಲ ಪ್ರತಿಯನ್ನು ನಾನು ಇವತ್ತಿನವರೆಗೆ ನೋಡಿಲ್ಲ.

ಅದಿಕಾರ ಪತ್ರದ ಸ್ಟಾಂಪನ್ನು 500 ರೂ ಕೊಟ್ಟ ನನ್ನ ತಂದೆ ಖರೀದಿಸಿ ತಂದಿದ್ದಾರೆ ಎಂದರೆ ಸರಿಯಲ್ಲ. ಆ ಅದಿಕಾರ ಪತ್ರದಲ್ಲಿ ಏನು ಬರೆದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಅದಿಕಾರ ಪತ್ರದಲ್ಲಿ ಸಿ ಟಿ ಎಸ್ 3145/2 ಇದನ್ನು ನನ್ನ ತಂಗಿಯ ಗಂಡ ಮಂಜಪ್ಪನಿಂದ ನನ್ನ ಅಣ್ಣ 1 ನೇ ಪ್ರತಿವಾದಿ ಖರೀದಿ ತೆಗೆದುಕೊಳ್ಳಬೇಕು ಎಂದು ಬರೆದಿತ್ತು. ಆ ದಾಖಲೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ಎಲ್ಲರೂ ಒಪ್ಪಿ ಸಹಿ ಮಾಡಿಕೊಟ್ಟಿದ್ದರು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ ಮಂಜಪ್ಪನಿಂದ 1 ನೇ ಪ್ರತಿವಾದಿ ಖರೀದಿಸಬೇಕು ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಆ ಅದಿಕಾರ ಪತ್ರದಲ್ಲಿ ಒಟ್ಟು 5 ಆಸ್ತಿಗಳ ಬಗ್ಗೆ ನಮೂದು ಇತ್ತು ಎಂದರೆ ಸರಿಯಲ್ಲ.

ದಿಃ 28-07-2014 ರಂದು ಎಫ್ ಡಿ ನಂ. 32364 ರಲ್ಲಿ 90 ಸಾವಿರ, ದಿಃ 20-09-2014 ರಂದು ಎಪ್, ಡಿ ನಂ. 32390 ರಲ್ಲಿ 8 ಲಕ್ಷ ರೂಗಳನ್ನು, ದಿಃ 30-09-2014 ರಂದು ಎಫ್ ಡಿ ನಂ. 42396 ಇದರ ಮುಖಾಂತರ 9 ಲಕ್ಷ ಹೀಗೆ ಒಟ್ಟು 17 ಲಕ್ಷ 90 ಸಾವಿರಗಳನ್ನು ನನ್ನ ತಂದೆಯ ಹೆಸರಿನಲ್ಲಿ ಕರ್ನಾಟಕ ಬ್ಯಾಂಕ ರಾಣೇಬೆನ್ನೂರನಲ್ಲಿ ಮುದ್ದತ್ತು

ಠೇವಣಿ ಇಡಲಾಗಿತ್ತು ಎಂದರೆ ಸರಿಯಲ್ಲ. ದಿಃ 13-12-2014 ರಂದು ಎಫ್ ಡಿ ನಂ. 3320471588 ಇದರ ಮುಖಾಂತರ 6 ಲಕ್ಷ ರೂಗಳನ್ನು ನನ್ನ ತಾಯಿಯ ಹೆಸರಿಲಿನಲ್ಲಿ ಕೆ ಸಿ ಸಿ ಬ್ಯಾಂಕನಲ್ಲಿ ಎಫ್ ಡಿ ಇಡಲಾಗಿತ್ತು ಎಂದರೆ ಸರಿಯಲ್ಲ. ನಾವು ಕೊಟ್ಟ ಅದಿಕಾರ ಪತ್ರದ ಆದಾರದ ಮೇಲೆ 1 ನೇ ಪ್ರತಿವಾದಿಯು ಎಲ್ಲ ದಾವಾ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣವನ್ನು ನನ್ನ ತಂದೆ ಕೈಗೆ ಕೊಟ್ಟಿದ್ದರು, ನನ್ನ ತಂದೆ ಮೇಲ್ಕಾಣಿಸಿದ ರೀತಿಯಲ್ಲಿ ಎಫ್ ಡಿ ಇಟ್ಟಿದ್ದರು ಎಂದರೆ ಸರಿಯಲ್ಲ. ಉಳಿದ ಹಣವನ್ನು ಎಲ್ಲ ಸಹೋದರಿಯರಿಗೂ ನಮ್ಮ ತಂದೆ ಕೊಟ್ಟಿದ್ದರು ಎಂದರೆ ಸರಿಯಲ್ಲ, ಎಲ್ಲ ಹಣವನ್ನು ನನ್ನ ತಂದೆ ಹಾಗೂ 1 ನೇ ಪ್ರತಿವಾದಿ ಹಂಚಿಕೊಂಡಿದ್ದರು.

ಮಾಗೋಡ ಗ್ರಾಮದ ಜಮೀನು ಮಾರಾಟ ಮಾಡಿ ಬಂದ ಹಣ 69 ಸಾವಿರ ನನ್ನ ತಂದೆ ಕೈಯಲ್ಲಿ ಇತ್ತು ಎಂದರೆ ಸರಿಯಲ್ಲ. ಗೌಡಶಿವಣ್ಣನವರ ಇವರಿಗೆ ಮಾಡಿ ಕೊಟ್ಟ ಕ್ರಯ ಪತ್ರಕ್ಕೆ ನಾನು 1 ನೇ ಪ್ರತಿವಾದಿ ನನ್ನ ತಂದೆ ಹಾಗೂ ಇತರೆ ಸಹೋದರಿಯರು ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಹುಟ್ಟಿ ಬೆಳೆದು ಇಲ್ಲೇ ಮದುವೆ ಯಾಗಿದ್ದರಿಂದ 1 ನೇ ಪ್ರತಿವಾದಿಯ ಬಗೆ ಎಲ್ಲ ಮಾಹಿತಿ ಇದೆ. -1 ನೇೀ ಪ್ರ 2 ವಾದಿಯು ನನ್ನ ತಾಯಿಗೆ ಇಚ್ಚೆಗೆ ವಿರುದ್ದವಾಗಿ ಬೇರೆ ಕನ್ಯಯೊೀಂದಿಗೆ ಮದುವೆ ಯಾಗಿದ್ದರು ಎಂದರೆ ಸರಿಯಲ್ಲ, ನಾವು ಎಲ್ಲರೂ ಒಪ್ಪಿ ಮದುವೆ ಮಾಡಿದ್ದೇವೆ. 1 ನೇ ಪ್ರತಿವಾದಿ ಮನೆ ಬಿಟ್ಟು ಬೇರೆ ಮನೆ ಯಾವ ಕಾರಣಕ್ಕೆ ಮಾಡಿದಾದ್ನೆ ಎಂದು ಗೊತಿತಲ್ಲ. 1 ನೇ ಪ್ರತಿವಾದಿಗೆ ವ್ಯವಸಾಯ ಬಿಟ್ಟರೆ ಬೇರೆ ಉದ್ಯೋಗ ಇಲ್ಲ ಎಂದರೆ ಸರಿ . ಆದರೆ ಬೇರೆ ವ್ಯವಹಾರ ಕೂಡ ಮಾಡುತ್ತಾನೆ. ನಮ್ಮ್ನ ಓಣಿಯ ಜನ ಹಾಗು ಸಂಬಂದಿಕರು 1 ನೇ ಪ್ರತಿವಾದಿಯ ಜೊತೆ ಉತ್ತಮ ಸಂಬಂದ ಹೊಂದಿದ್ದಾರೆ ಎದಂರೆ ಸರಿ . ಆತನ ಸ್ವಬಾದವದ ನನ್ನ

ಎಲ್ಲ ಕುಟುಂಬ ಸದಸ್ಯರಿಗೆ ಗೊತ್ತು ಎದಂರೆ ಸರಿ . 1 ನೇ ಪ್ರತಿವಾದಿಗೆ ಯಾವುದೇ ಕೆಟ್ಟ ಹೆಸರು ಬಂದಿಲ್ಲ ಎಂದರೆ ಸರಿ . 1 ನೇ ಪ್ರತಿವಾದಿಯು ನನ್ನ ತಂದೆ ತಾಯಿಗಳನ್ನು ನೋಡಿಕೂಳ್ಳದ ಕಾರಣ ನಾವು ಆತನ ಜೊತೆಗೆ ಬಾಂದವ್ಯ ಸರಿಯಾಗಿ ಇಟ್ಟುಕೊಂಡಿಲ್ಲ. 1 ನೇ ಪ್ರತಿವಾದಿಯು ನನ್ನ ತಂದೆ ತಾಯಿಗೆ ಬಗ್ಗೆ ಗೌರವದ ಬಾವನೆ ಹೊಂದಿದ್ದಾನೆ ಎದಂರೆ ಸರಿಯಲ್ಲ, ನನ್ನ ತಂದೆ ತಾಯಿಗಳನ್ನು ಆತ ಪೂಜ್ಯ ರೀತಿಯಲ್ಲಿ ನೋಡಿಕೊಂಡು ಬಂದಿದ್ದಾನೆ ಎಂದರೆ ಸರಿಯಲ್ಲ. ಈಗ ಉದ್ದೇಶಪೂರ್ವಕಾಗಿ 1 ನೆ ಪ್ರತಿವಾದಿಯು ನನ್ನ ತಂದೆ ತಾಯಿಗಳನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿ ಟಿ ಎಸ್ 3145/2 ಅಲ್ಲದೆ ಇತರೆ 4 ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿದ್ದೇವೆ ಎಂದರೆ ಸರಿ. ಇತರೆ 4 ಆಸ್ತಿಗಳು ಯಾರ ಹೆಸರಿನಲ್ಲಿ ಖರೀದಿ ಆಗಿವೆ ಎಂದು ಗೊತ್ತು. ಸರ್ವೇ ನಂ. 167/2 ಎ ಇದು ಬಸವರಾಜ ತಂದೆ ವೀರಭದ್ರಪ್ಪ ಹನಗವಾಡಿ ಇವರ ಹೆಸರಿನಲ್ಲ ಖರೀದಿ ಆಗಿದೆ. ಅದೇ ರೀತಿ 167/3 ಎ ಇದು ಬಸವರಾಜ ಇವರ ಹೆಸರಿನಲ್ಲಿ ಖರೀದಿ ಆಗಿದೆ. ಸರ್ವೇ ನಂ. 168/3 ಸಿ 4 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಆಗಿದೆ. ಅದೇ 168/3 ಎ/2 ಇದು 4 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರ ಯವಾಗಿದೆ. ಪ್ರತಿವಾದಿ 3 ಮತ್ತು 4 ರವರು ನನ್ನ ತಾಯಿಯ ಅಕ್ಕನ ಮಕ್ಕಳು ಇರುತ್ತಾರೆ. ಅವರು ಊರು ಹರಿಹರ ತಾಲೂಕ ಹನಗವಾಡಿ ಇರುತ್ತದೆ. ಖರೀದಿ ಆಗಿದಾಗಿನಿಂದ ಅನುಸೂಚಿ-ಅ ಸ್ವತ್ತುಗಳು ಖರೀದಿಸಿದವರ ಕಬ್ಜೆಯಲ್ಲಿವೆ ಎಂದರೆ ಸರಿಯಲ್ಲ, ನನ್ನ ಅಣ್ಣನ ಹೆಸರಿನಲ್ಲಿ ಇದೆ. ಪ್ರತಿವಾದಿ 3 ಮತ್ತು 4 ರವರು ನನ್ನ ತಾಯಿಯ ಖಾಸಾ ಸಹೋದರಿಯರ ಮಕ್ಕಳು ಇರುತ್ತಾರೆ. ಅವರು ನನ್ನ ತಂದೆ ತಾಯಿಯ ಜೊತೆಗೆ ಒಳ್ಳೆಯ ಬಾಂಧವ್ಯ ಹೊಂದಿದ್ದಾರೆ.

ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಎಲ್ಲ ವಿಷಯಗಳು ನನ್ನ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅನುಸೂಚಿ–ಅ ಸ್ವತ್ತಿನ ಆರ್ ಟಿ ಸಿ ಗಳನ್ನು ನಾನು ನೋಡಿದ್ದೇನೆ. ಆ ಕ್ರಯ ಪತ್ರಗಳಲ್ಲಿ ಜಮೀನನ್ನು ಎಷ್ಟು ಬೆಲೆಗೆ ಖರೀದಿಸಿದ್ದಾರೆ ಎಂದು ಬರೆಸಿದ್ದಾರೆ ಎಂದು ಗೊತ್ತಿಲ್ಲ. ಆ ಕ್ರಯ ಪತ್ರಗಳನ್ನು 4 ವರ್ಷಗಳ ಹಿಂದೆ ಮೊದಲ ಬಾರಿಗೆ ನೋಡಿದ್ದೇನೆ. ಅದಾದ ನಂತರ ನಾನು ಪುನಃ ಇಲ್ಲಿಯವರೆಗೆ ನೋಡಿಲ್ಲ. ಅವುಗಳನ್ನು ಎಷ್ಟು ಬೆಲೆಗೆ ಮಾರಾಟ ಮಾಡಿದ್ದಾರೆ ಎಂದು ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿಲ್ಲ. ನಾವು ಎಲ್ಲರೂ ಸೇರಿ ಬರೆದುಕೊಟ್ಟ ಅಧಿಕಾರ ಪತ್ರದ ಆದಾರದ ಮೇಲೆ 1 ನೇ ಪ್ರತಿವಾದಿಯು ಪ್ರತಿವಾದಿ 3 ಮತ್ತು 4 ರವರ ಪರವಾಗಿ ಅನುಸೂಚಿ–ಅ ಸ್ವತ್ತು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಮಾಡಿದ ಎಲ್ಲ ವ್ಯವಹಾರಗಳ ನಮ್ಮ ಒಪ್ಪಿಗೆ ಪಡೆದು ಮಾಡಿದ ವ್ಯವಹಾರವಾಗಿದ್ದರಿಂದ ಅವುಗಳು ನಮಗೆ ಬಾಂದಾಯಿಸುತ್ತದೆ ಎಂದರೆ ಸರಿಯಲ್ಲ. ಆಸ್ತಿಗಳ ಮಾಗಡಿಯನ್ನು ಸರಿಯಾಗಿ ಮಾಡದೇ ಅದಕ್ಕೆ ಸೂಕ್ತವಾದ ನಾಯಾಲಯದ ಶುಲ್ಕ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.